

# ವಿದೇಶಿ ಲೇಖಕರು ನನ್ನ ಆಯ್ಕೆ

ಜೆ.ವಿ. ಕಾರ್ಲೊ

**1**

ನಾನು ಅನುವಾದಕ ಎನ್ನುವುದಕ್ಕಿಂತ ಮೊದಲು, ಒಬ್ಬ ಓದುಗ. ನನ್ನ ಸ್ನೇಹಿತರು ನೀನೊಬ್ಬ ಸಾಹಿತ್ಯದ ಕತ್ತೆ ಕಣೋ. ಹುಲ್ಲು, ಪ್ಲಾಸ್ಟಿಕ್ಕು, ಕಾಗದ, ಪಾರ್ಥೇನಿಯಂ ಏನು ಬೇಕಾದರೂ ತಿಂತೀಯಾ ಎನ್ನುತ್ತಾರೆ! ನನಗೆ ಯಾವುದೇ ಪ್ರಕಾರದ ಸಾಹಿತ್ಯ ಕೃತಿಯೂ ಸಲ್ಲದು ಎಂಬುದಿಲ್ಲ. ಕತೆ, ಕಾದಂಬರಿ (ಪತ್ತೆದಾರಿ, ವೈಜ್ಞಾನಿಕ, ಅತೀಂದ್ರಿಯ, ಆಧ್ಯಾತ್ಮಿಕ) ಹೀಗೆ ಯಾವುದೂ ಆಗಬಹುದು. 'ಆಟೋಬಯಾಗ್ರಫಿ ಆಫ್ ಎನ್ ಯೋಗಿ'ಯ ಒಂದು ಪ್ರಸಂಗವನ್ನು ಕೊಂಕಣಿಗೆ ಅನುವಾದಿಸಿದ್ದೇನೆ. ಓಶೊನ ಪುಸ್ತಕ ಪ್ರೇಮವನ್ನೂ ಕೊಂಕಣಿ ಓದುಗರಿಗೆ ಉಣಬಡಿಸಿದ್ದೇನೆ. ಯುವಾಲ್ ನೋವಾ ಹರಾರಿಯ '**Homeo Sapiens, Homo Deus**' ಬಗ್ಗೆಯೂ ಬರೆದಿದ್ದೇನೆ.

ಒಂದು ಕತೆಯನ್ನು ಅನುವಾದಿಸಲು ಎತ್ತಿಕೊಂಡಾಗ ನಾನು, ನನಗೆ ಗೊತ್ತಿರುವ ಓದುಗರು